# Views on Venkatram ...Dr BK Chandrashekar

## ಪ್ರೊ॥ ಬಿ ಕೆ ಚಂದ್ರಶೇಖರ್ ಅವರ ಭಾಷಣ

ದಿ!ವೆಂಕಟ್‌ರಾಮ್ ಅವರ ಪತ್ನಿ ಶ್ರೀಮತಿ ಸರೋಜ ವೆಂಕಟ್‌ರಾಮ್ ಅವರೇ, ಅಧ್ಯಕ್ಷರಾದ ಖಾದ್ರಿ ಶಾಮಣ್ಣನವರೇ, ಸಚಿವರಾದ ಅಬ್ದುಲ್ ನಜೀರ್ ಸಾಬ್ ಅವರೇ, ಪುರಸಭೆ ಅಧ್ಯಕ್ಷರೇ, ಸ್ನೇಹಿತ ರಮೇಶ್ ಬಂದಗದ್ದೆಯವರೇ ಮತ್ತು ಸ್ನೇಹಿತರೇ.

ಯಾವ ಥರ ಸಭೆಯಲ್ಲಿ, ಅಂದ್ರೆ ಯಾವ ಥರ ಪ್ರತಿನಿಧಿಗಳು ಜನಗಳು ಸೇರಿಸಲಿಕ್ಕೆ ಸಭೆಯಲ್ಲಿ ನಾನು ಮಾತಾಡ್ತೀನಿ ಅನ್ನೋ ಕಲ್ಪನೆ ನನಗೆ ಖಂಡಿತ ಇರಲಿಲ್ಲ. ನಾನು ಈ ಪಾಠ ಹೇಳೋ ಧಾಟಿಯಲ್ಲಿ ಕ್ಲಾಸ್‌ರೂಮಿನಲ್ಲಿ ಪಾಠ ಹೇಳೋ ಧಾಟಿಯಲ್ಲಿ ಕೆಲವು ವಿಚಾರಗಳನ್ನ ಯೋಚನೆ ಮಾಡ್ಕೊಂಡು ಇಲ್ಲಿ ಬರೋದಕ್ಕೆ ಮುಂಚೆ ಒಂದಷ್ಟು ಟಿಪ್ಪಣಿ ಬರೀತಾ ಕೂತಿದ್ದೆ. ಇಲ್ಲಿಗೆ ಕರ್ಕೊಂಡು ಬರೋಕೆ ಮುಂಚೆ ಕೇಳೋದಕ್ಕೆ ಪ್ರಯತ್ನ ಪಟ್ಟೆ. ಇಲ್ಲಿ ವಿದ್ಯಾರ್ಥಿಗಳೇ ಬಹಳ ಜನ ಇರ್ತಾರೋ? ಕಾಲೇಜು ಸ್ಕೂಲಿನ ಮೇಷ್ಟ್ರುಗಳೇ ಇರ್ತಾರೋ? ಬೇರೆ ಜನಗಳೇ ಇರ್ತಾರೋ ಅಂತ. ಒಂದೆರಡು ವಿಚಾರಗಳು ಗಂಭೀರವಾಗಿ ಯೋಚನೆ ಮಾಡ್ಬೇಕು. ಮಾತನಾಡಬೇಕು ಅಂತ ಯಾಕೆ ಅನ್ನಿಸತ್ತೆ ಅಂದ್ರೆ ದಿ}}ವೆಂಕಟ್‌ರಾಮ್ ಅವರು ಬಹಳ ಮೇಧಾವಿಯಾದ ವ್ಯಕ್ತಿ, ಮೇಧಾವಿಯಾದ ಮನಸ್ಸು. ಯಾವಾಗಲೂ, ಅದರಲ್ಲೂ ರಾಜಕೀಯ ಅಥವಾ ಸಮಾಜದ ಬಗ್ಗೆ ಚರ್ಚೆ ಮಾಡಿದಾಗ, ನನಗೆ ಪರಿಚಯ ಇದ್ದ ಹಾಗೆ ಯಾವಾಗ ನೋಡಿದ್ರೂ ಬಹಳ ಸೀರಿಯಸ್ಸಾಗಿ ಮಾತಾಡೋರು. ಚೂರೂ ಹುಡುಗಾಟ ಇರ್ತಿರ್ಲಿಲ್ಲ ಅದರಲ್ಲಿ. ಹಾಸ್ಯದ ಪ್ರಶ್ನೆ ಬೇರೆ. ಅಂದ್ರೆ ಈಗ ನಾವೆಲ್ಲ ನಮ್ಮ ಪೀಳಿಗೆಯಲ್ಲಿ ಬಹಳ ಜನ ಮಾಡ್ತೀವಿ ನೋಡಿ. ನಮಗೆ ರಾಜಕೀಯವೂ ಒಂದೇ. ಮನೆಯಲ್ಲಿ ಹಿರಿಯರ ಬಗ್ಗೆ, ನಮ್ಮ ಮೇಷ್ಟ್ರುಗಳ ಬಗ್ಗೆ ಮಾತ್ನಾಡೋದೂ ಒಂದೇ. ಎಲ್ಲಾ ಹೀಗೆ ಒಂದ್ ಧಾಟಿಯಲ್ಲಿ ಲೈಟ್ ಹಾರ್ಟೆಡ್ ಅಂತ ಹೇಳ್ತೀವಲ್ಲ, ಲಘುವಾಗಿ ಮಾತ್ನಾಡೋದು ಅಭ್ಯಾಸ ಸ್ವಲ್ಪ ಜಾಸ್ತಿಯಾಗಿದೆ ಅನ್ನಿಸತ್ತೆ ಇವಾಗ. ವೆಂಕಟ್‌ರಾಮ್ ಅಂಥವರು ಅಂಥದ್ದಕ್ಕೆ ಆಸ್ಪದ ಕೊಡ್ತಾನೇ ಇರ್ಲಿಲ್ಲ ಯಾವತ್ತೂನೂ ಅಂತ

ನಂಗನ್ಸತ್ತೆ. ಆದ್ದರಿಂದ ಮುಖ್ಯವಾಗಿ ವೆಂಕಟ್‌ರಾಮ್ ಅವರ ಸ್ಮರಣಸಭೆ ಆದ್ದರಿಂದ ಗಂಭೀರವಾಗಿಯೇ ಒಂದೆರಡು ವಿಚಾರವನ್ನ ಆದ್ರೆ ವಿಪರೀತ ಕಾಲ ತೆಗೆದುಕೊಳ್ಳದೆ ಅಂತಹ ಒಂದೆರಡು ವಿಚಾರ ಹೇಳಿ ಬೇಗ ಮುಗಿಸೋಕ್ಕೆ ಪ್ರಯತ್ನ ಪಡ್ತೀನಿ. ದಯವಿಟ್ಟು ವಿದ್ಯಾರ್ಥಿಗಳು ಮತ್ತು ಇತರರು ಕೊಂಚ ಅದರ ಬಗ್ಗೆ ಯೋಚನೆ ಮಾಡಿದ್ರೆ ಒಳ್ಳೇದು ಅನ್ಸುತ್ತೆ.

ಮೊದಲನೆಯದಾಗಿ ಗೌರಿಬಿದನೂರಿನ ಜನಕ್ಕೆ ನಾನೇನೂ ಹೇಳ್ಬೇಕಾಗಿಲ್ಲ ಅಂತ ಅಂದ್ಕೊಂಡಿದ್ದೀನಿ. ವೆಂಕಟ್‌ರಾಮ್ ಅವರು ಒಬ್ಬ ಪ್ರಬುದ್ಧ ಲೋಹಿಯಾವಾದಿ. ಡಾ॥ರಾಮ್ ಮೋಹನ್ ಲೋಹಿಯಾ ಚಿಂತನೆಯ ಚಿಂತನೆಯನ್ನ ಒಪ್ಪಿಕೊಂಡು, ಅದರ ವಿಶೇಷಣೆ ಮಾಡಿಕೊಂಡು ಹಲವಾರು ವಿಧದಲ್ಲಿ ಅದನ್ನು ಕಾರ್ಯ ರೂಪಕ್ಕೆ ತರೋದಕ್ಕೆ ಪ್ರಯತ್ನಪಟ್ಟ ವ್ಯಕ್ತಿ ಅಂತ ಹೊಸದಾಗಿ ನಿಮಗೆ ಹೇಳಬೇಕಾಗಿಲ್ಲ.  ಆದರೆ ಒಂದು ಮೊದಲನೇ ಪ್ರಶ್ನೆ ಕೇಳಕ್ಕೆ ನನ್ನಲ್ಲಿ ನಾನು ಕೇಳ್ಕೊಂಡಿದ್ದು ಕರ್ನಾಟಕದಲ್ಲಿ ಇಂಥ ವ್ಯಕ್ತಿಗಳು, ಗೋಪಾಲಗೌಡರಂಥ ವ್ಯಕ್ತಿಗಳು ಇನ್ನೂ ಹಲವಾರು ಸೋಶಿಯಲಿಸ್ಟ್ ಇದ್ದ ಈ ಕರ್ನಾಟಕ ರಾಜ್ಯದಲ್ಲಿ ಸೋಶಿಯಲಿಸ್ಟ್ ರಾಜಕೀಯ ಯಾಕೆ ಬೆಳೀಲಿಲ್ಲ? ಅಂಥ ಮೊದಲನೇ ಪ್ರಶ್ನೆ ಒಂದು ಬರತ್ತೆ ನನ್ನ ಮನಸಲ್ಲಿ. ಈ ಪ್ರಶ್ನೆಗೆ ನಾನಾ ಥರ ಉತ್ತರ ಕೊಡಬಹುದು. ಒಂದು ಇತರ ಪಕ್ಷಗಳ ಪ್ರಾಬಲ್ಯ ಚೆನ್ನಾಗಿ ಹಮ್ಮಿಕೊಂಡದ್ದು ಸ್ವೀಡನ್ ದೇಶದಿಂದ ಬಂದ ಕಾಪ್ರೋಸ್ ಪಕ್ಷ ಕೂಡಾ ಇತ್ತು. ಆಮೇಲೆ ಇನ್ನೂ ಕೆಲವು ನನ್ನ ಸ್ನೇಹಿತರೇ ಹೇಳಿರುವ ಪ್ರಕಾರ ಸೋಶಿಯಲಿಸ್ಟ್ ಪಕ್ಷದಲ್ಲಿ ಸುಮಾರು ಜನ ಸದಸ್ಯರುಗಳಿಗೆ ನಾವು ಕ್ಲಾರಿಟಿ ಅಂತ ಏನು ಹೇಳ್ತೀವಿ ರಾಜಕೀಯದ ಬಗ್ಗೆ ಒಂದು ನಿಚ್ಚಳವಾದ ಒಂದು ಅಭಿಪ್ರಾಯ ಅದರ ಚೌಕಟ್ಟು ಆ ಕಾಲದಲ್ಲಿ ಇರಲಿಲ್ಲ ಅಂತ ಒಂದು ಕಾರಣ ಕೊಡ್ತಾರೆ. ಮುಖ್ಯವಾಗಿ ಡಿಮಾಂಡ್ಸು, ಒತ್ತಾಯಗಳು ಅಂತ ಏನು ಹೇಳ್ತೀವಿ ನನಗೆ ಅನ್ನಿಸೋದು ಸೋಶಿಯಲಿಸ್ಟ್ ಪಕ್ಷ ಸುಮಾರು ವರ್ಷಗಳು ಆ ಚಳುವಳಿ ಅಂದರೆ ಆಂದೋಲನದಲ್ಲಿ ಸರ್ಕಾರದ ಮುಂದಿಟ್ಟ ಡಿಮಾಂಡ್ಸ್. ಅದರ ಬಗ್ಗೆ ಒಂದು ನಿಮಿತ್ತ ನೀವು ನೋದಿದರೆ ಕಡೇ ಪಕ್ಷ ಒಂದು ಕಾರಣವಾದರೂ ಗೊತ್ತಾಗುತ್ತೆ ಅನ್ನಿಸತ್ತೆ. ಸೋಶಿಯಲಿಸ್ಟ್ ರಾಜಕೀಯ ಯಾಕೆ ಬೆಳೀಲಿಲ್ಲ ಅಂತ ಗೊತ್ತಾಗತ್ತೆ. ಒಂದು ಸಾರಿ ವ್ಯಾಪಕವಾಗಿ ಬೆಳೆದ ಮೇಲೆ ೧೫–೨೦–೩೦ ವರ್ಷ ನಡಕೊಂಡು ಬರೋದು ಬಹಳ ಮುಖ್ಯ. ಇವೆರಡೂ

ಆಗಿಲ್ಲದಿರುವುದಕ್ಕೆ . ಅದರಲ್ಲಿ ಕೆಲವು ತೀರಾ ಹಾಸ್ಯಾಸ್ಪದವಾದ ಅಂದರೆ ಒಂದೇ ಒಂದು ಸೆಕ್ಶನ್ ಸೋಶಿಯಲಿಸ್ಟ್ ರಾಜಕೀಯ ತಪ್ಪಿ ಅಂತ ತಪ್ಪು ತಿಳ್ಕೋಬೇಡಿ. ಸೋಶಿಯಲಿಸ್ಟ್ ಪಾರ್ಟಿ ಹೀಗೆ ಇದನ್ನ ಮುಂದಿಡ್ತು ಅಂತ ಹೇಳ್ತಿಲ್ಲ. ಹಾಸ್ಯಾಸ್ಪದವಾದ ಒಂದೆರಡು ಡಿಮಾಂಡುಗಳನ್ನಿಟ್ಟು ಬಹಳ ಪಬ್ಲಿಸಿಟಿ ತಗೊಂಡು ಕರ್ನಾಟಕದಲ್ಲಿ ಮಾಡಿದ್ದರಿಂದಲೂ ಬಹಳ ಒಂಥರಾ ಮುಖ್ಯವಾದ ರೈತರಿಗೆ ಸಂಬಂಧಪಟ್ಟ ಕೆಲವು ಡಿಮಾಂಡುಗಳನ್ನಿಟ್ಟಿದ್ದಕ್ಕೆ ಎರಡರಲ್ಲೂ ಕೂಡಾ ತಪ್ಪಾಗಿದೆ ಅಂತ ಹೇಳ್ತೀನಿ. ನಾನು ಇದಕ್ಕೊಂದು ಉದಾಹರಣೆ ಕೊಡ್ತೀನಿ. ಬಹಳ ಶೀಘ್ರವಾಗಿ ಇದಕ್ಕೊಂದು ಉದಾಹರಣೆ ಕೊಡ್ತೀನಿ. ಏನು ಈಗೊಂದು ಐದಾರು ವರ್ಷದ ಹಿಂದೆ ಒಂದು ೨೦–೨೫ ಜನ ಸೋಶಿಯಲಿಸ್ಟ್ ಪಕ್ಷದ ಅಥವಾ ಸೋಶಿಯಲಿಸ್ಟ್ ಸಿದ್ಧಾಂತಕ್ಕೆ ಒಪ್ಪಿಕೊಂಡಿದ್ದ ಯುವಕರು ದೊಡ್ಡ ಪಂಚತಾರಾ ಹೊಟೇಲ್ ಇದೆ ನೋಡಿ ಅಶೋಕ ಹೊಟೇಲ್ ಮುಂದಿಂದು. ಆ ಹೊಟೇಲ್‌ಗೆ ಹೋಗಿ ಪ್ರತಿಭಟನೆ ನಡೆಸಿದರು. ಒಂದೆರಡು ಮೂರು ದಿನ ಒಂದೇ ಸಮ ನಡೆಸಿದ್ರು ಎಂದು ಡಿಮಾಂಡ್ ಇತ್ತು ಅಂತ. ನಾನು ಬಹಳ ಕುತೂಹಲಕರವಾಗಿ ಹೋಗಿ ಮಾತನಾಡಿಸಿ ನೋಡ್ದೆ. ಇದೆ ಥರಾ ಕರಪತ್ರ ಹಂಚಿದ್ರು. ಅದರಲ್ಲಿ ಏನು ಡಿಮಾಂಡ್ ಇತ್ತು ಗೊತ್ತೇನು? ಅಶೋಕ ಹೊಟೇಲ್‌ನಲ್ಲಿ ಮಾರೋ ದೋಸೆ ಬೆಲೆ ಬಹಳ ಜಾಸ್ತಿ ಅದನ್ನ ಕಡಿಮೆ ಮಾಡಿ ಅಂತ. ಮಾಡ್ಲಿ ಸ್ವಾಮಿ ಪಂಚತಾರಾ ಹೊಟೇಲು ೨೫ ರೂಪಾಯಿ ಮಾಡ್ಲಿ ನಮ್ಮಪ್ಪನ ಗಂಟು ಏನು ಹೋಗುತ್ತೆ? ಏನು ಬಡವರು ಹೋಗಿ ತಿಂತಾರೆಯೇ? ಇದು ಹುಡುಗಾಟಕ್ಕೆ ಮಾಡ್ಲಿಲ್ಲ. ಅವರು ಅಲ್ಲಿ ಹೋದ ಜನ ಪ್ರತಿಭಟನೆ ಮಾಡಿದ ಜನ ಬಹಳ ಸೀರಿಯಸ್ಸಾಗಿ ತಗೊಂಡು ಮಾಡಿದ್ರು. ಯಾಕೆ ಮಾಡಿದ್ರು? ಅಂತ ನಾನು. ಆಹಾರದ ಬೆಲೆ ಜಾಸ್ತಿ ಆದ್ರೆ ಅದನ್ನ ಪ್ರತಿಭಟಿಸಬೇಕಂತ ಡಾ॥ಲೋಹಿಯಾ ಉದ್ದಕ್ಕೂ ಹೇಳಿದ್ದಾರೆ. ಬೇಕಾದಷ್ಟು ಕಡೆ ಹೇಳಿದ್ದಾರೆ. ಹಾಗಂತ ಈ ಥರದ್ದು ಕೆಲಸ ಮಾಡಿ ಅಂತ ಅವರು ಹೇಳಿಲ್ಲ. ಇದಕ್ಕಿಂತ ಇನ್ನೂ ಸ್ವಲ್ಪ ಗಂಭೀರವಾದ್ದು ಕರ್ನಾಟಕ ರಾಜ್ಯದಲ್ಲಿ ಅದನ್ನ ಸೋಶಿಯಲಿಸ್ಟ್ ರಾಜಕೀಯದಲ್ಲಿ ಬಹಳಷ್ಟು influential ಆಗಿರುವ ಒಬ್ಬರು ಸಿದ್ಧಾಂತಿಗಳು ಅಂತಹ ಒಬ್ಬರು ನನಗೆ ಬಹಳ ಸ್ನೇಹಿತರಾದವರು ನನಗೆ ಹಿಂದೆ ಮೇಷ್ಟರಾಗಿದ್ದವರು, ಡಾ॥ಯು ಆರ್ ಅನಂತಮೂರ್ತಿಯವರು ಬಂದು ಹೇಳ್ತಾ ಇದ್ರು. ೬–೭ ವರ್ಷಗಳ ಹಿಂದೆ ಬರೆದಿದ್ರು ಅದರ ಬಗ್ಗೆ ಅವರು ಪತ್ರಿಕೆಗಳಲ್ಲಿ ಆರ್ಟಿಕಲ್ ಬರೆದ್ರು ಕೂಡ

ಏನು? ಈ ಮೇಲ್ಜಾತಿಯ ರಾಜಕೀಯದಲ್ಲಿ ಮೇಲ್ಜಾತಿಯ ಹೆಬ್ಬಾಳಿಕೆ ಇರುವ ರಾಜಕೀಯದಲ್ಲಿ ಕರ್ನಾಟಕದಲ್ಲಿ ನಿಜವಾಗಿಯೂ ದೇವರಾಜ ಅರಸರವರಾಗ್ಲಿ ಯಾರೋ ಇನ್ನೂ ಮುಖ್ಯಮಂತ್ರಿ "ನಿಮಗೆ ದುರ್ಬಲ ವರ್ಗಗಳು ಏನಿವೆ ನಿಜವಾಗ್ಲೂ ಮನಸ್ಸಿನ ಬಗ್ಗೆ ಹೇಗೆ ಕೆಲಸ ಮಾಡ್ತೀರಿ ಅಷ್ಟು ಕೇಳಿದ್ರು. ಆಮೇಲೆ ಅದನ್ನ ಒತ್ತಾಯ ಮಾಡಿದ್ರು ಡಿಮಾಂಡ್ ಮಾಡಿದ್ರೂ ಏನು? ಇಷ್ಟು ಶ್ರದ್ಧೆ ಇದೆ. ಭೂಮಿ ವ್ಯವಹಾರ ತಾನೆ ಎಲ್ಲಾರಿಗೆ ಮುಖ್ಯ, ಖಂಡಗಳ ಆಸ್ತಿ ಅವರು ಬೇರೆ ಎಲ್ಲಾ ಕಂಟ್ರೋಲ್ ಮಾಡ್ತಾರೆ ಆದ್ರಿಂದ ನೀವು ಒಪ್ಪಿ ಕಂದಾಯ ಮಂತ್ರಿಯ ರೆವೆನ್ಯೂ ಮಿನಿಸ್ಟರಿನ ಒಬ್ಬ ಹರಿಜನದವನನ್ನ ತಂದು ಮಂತ್ರೀನ ಮಾಡ್ತೀರಾ ಅಂತ ಧೈರ್ಯವಾಗಿ ಕೇಳಿದ್ರು. ನಿಜವಾಗಿ ಹೇಳ್ತೀನಿ, ನನಗೆ ಅದನ್ನ ಕೇಳ್ದಾಗ ಆಶ್ಚರ್ಯ ಆಯ್ತು. ಇದು ಯಾವ ಮಹಾ ಡಿಮಾಂಡು. ಇದು ಯಾವ ಒತ್ತಾಯ? ಆರೇ ತಿಂಗಳಲ್ಲಿ ದೇವರಾಜ ಅರಸ್ ಅವರು ಬಸವಲಿಂಗಪ್ಪನವರನ್ನು ಕರಕೊಂಡು ಬಂದು ಕಂದಾಯ ಮಂತ್ರಿ ಮಾಡಿದ್ರು. ಆವಾಗ ಏನಾಗುತ್ತೆ ರಾಜಕೀಯದಲ್ಲಿ ಅಂತ ಒಂದು ಚಳುವಳಿ ಈ ಥರಾ ಒಂದೊಂದೇ ಡಿಮಾಂಡ್‌ಗಳನ್ನ ಕೇಳಿಕೊಳ್ತಾ ಹೋದ್ರೆ ಇಷ್ಟು ಈಸಿಯಾಗಿ ಸರ್ಕಾರ ಇಂಥ ಒಂದೊಂದು ಕೊಡ್ತಾ ಇದ್ರೆ ಮುಂದೆ ಏನು ಹೇಳಬೇಕು ಅಂತ್ಲೇ ಗೊತ್ತಾಗಲ್ಲ ಆ ಪರಿಸ್ಥಿತಿ ಬರುತ್ತೆ. ಇದಕ್ಕಿಂತ ಗಂಭೀರವಾದ್ದು ಒಂದು ನೋಡಿ. ಕಾಗೋಡು ಚಳುವಳಿ. ಇಲ್ಲಿರೋ ಜನಕ್ಕೆಲ್ಲ ಪರಿಚಯ ಇದೆ, ನನಗಿಂತ್ಲೂ ಜಾಸ್ತಿ ಪರಿಚಯ ಇದೆ. ಕಾಗೋಡು ಚಳುವಳಿ ಅದರ ಬಗ್ಗೆ ನಾನೇನು ಹೇಳ್ಲಿ. ಮಾತಾಡೋಕ್ಕೆ ಒಂದೇ ಒಂದು ವಿಷಯ ಅಂತ ಯಾವಾಗ ಗೇಣಿದಾರರಿಗೆ ನಿಮ್ಮ ಜಮೀನು ಕೊಡಬೇಕಂತ ಬಂದು ಒತ್ತಾಯ ಮಾಡ್ಟೀರಿ ಲ್ಯಾಂಡ್–ಅದರ ಬಗ್ಗೆ ನಡೀತಿ. ಶಿವಮೊಗ್ಗ ಜಿಲ್ಲೆಯಲ್ಲಿ. ನಿಮ್ಮಲ್ಲಿ ಬಹುಶಃ ತಿಳಿದಿರಬೇಕು. ನಿಮಗೆ ಇಡೀ ಕರ್ನಾಟಕದಲ್ಲಿ ಬಹಳ ಹೆಚ್ಚು ಸಂಖ್ಯೆಯಲ್ಲಿರುವ ರೈತರಿಗೆ ಶಿವಮೊಗ್ಗ ಬಹಳ ಸಣ್ಣ ಪ್ರಮಾಣದ ಜಮೀನು ಇರೋದು ಶಿವಮೊಗ್ಗ ಜಿಲ್ಲೆ. ಆ ಕಾಲಕ್ಕೆ ನನ್ನ ಪ್ರಕಾರ ಸೋಶಿಯಲಿಸ್ಟ್ ಸರಿಯಾಗಿ ಹಾಕ್ಲಿಲ್ಲ. ಇದೆಲ್ಲ ಯಾಕೆ ಹೇಳ್ತಾ ಇದೀನಿ ಅಂದ್ರೆ ಆಮೇಲೆ ಹೇಳ್ತೀನಿ. ಆ ವಿಚಾರ ಬರುವಾಗ ವೆಂಕಟರಾಮರನ್ನು ಎಷ್ಟು ಹೊಗಳಿದರೂ ಸಾಲದು. ಇನ್ನೂ ಅವರ ಬಗ್ಗೆ ನಾನು ಹೆಚ್ಚು ಮಾತನಾಡುವುದಿದೆ. ಆದರೆ ಸಮಯ ಅದಕ್ಕೆ ಸ್ಪಂದಿಸದೇ ಇರುವ ಕಾರಣ ಮತ್ತೊಮ್ಮೆ ಇದೇ ರೀತಿಯ ಕಾರ್ಯಕ್ರಮದಲ್ಲಿ ಇನ್ನೂ ಹೆಚ್ಚಿನ ವಿಷಯವನ್ನ ನಾನು ಮಾತನಾಡುತ್ತೇನೆ. ಇಷ್ಟು ಹೇಳಿ ನನ್ನ ಮಾತುಗಳನ್ನ

ಮುಗಿಸುತ್ತೇನೆ. ಅವರ ಬಗ್ಗೆ ನಾನು ಹೆಚ್ಚಾಗಿ ಮಾತನಾಡಲಿಕ್ಕೆ ಸಾಧ್ಯವಾಗದೇ ಇರುವುದರಿಂದ ನಿಮ್ಮೆಲ್ಲರ ಕ್ಷಮೆ ಕೋರಿ ನನ್ನ ಕೆಲವು ಮಾತುಗಳನ್ನ ಮುಗಿಸುತ್ತೇನೆ. ಅವರ ಕುಟುಂಬದವರಿಗೆ ಆ ದೇವರು ಹೆಚ್ಚಿನ ಶಕ್ತಿಯನ್ನು ಕೊಡಲಿ ಎಂದು ಕೇಳಿಕೊಳ್ಳುತ್ತೇನೆ. ನಮಸ್ಕಾರ.